

ಮಾತಾಡುವ ತನ್ನ ಇಚ್ಛೆಯನ್ನು ಆಕೆ ವ್ಯಕ್ತಪಡಿಸಿದಳು.

ಸರಿ, ಎಲ್ಲ ರೋಗಿಗಳಿಗೆ ಹೇಳುವಂತೆ ನನ್ನ ದಿನಚರಿಯನ್ನು ಬಡಬಡಿಸಿದೆ. ಯಾವ್ಯಾವ ದಿನ, ಯಾವಾಗ ಎಲ್ಲೆಲ್ಲಿ ನಾನು ಲಭ್ಯವಿರುವೆ ಎಂಬುದರ ವಿವರ ನೀಡಿದೆ. ಆದಷ್ಟು ಬೇಗ ಸಂಭಾಷಣೆ ಮುಗಿಸಿ ನಿದ್ದೆ ಮಾಡುವ ತವಕದಲ್ಲಿದ್ದ ನಾನು ಪೂರ್ಣ ಎಚ್ಚರಗೊಂಡದ್ದು ಆಕೆ 'ಡಾಕ್ಟರೆ ನಿಮ್ಮನ್ನು ನಾನು ಪ್ರೈವೇಟಾಗಿ ಭೆಟ್ಟಿಯಾಗಬೇಕಿತ್ತು' ಎಂದುಸಿರಿದಾಗಲೇ. ತನಗಾಗಿ ಒಂದರ್ಧ ಗಂಟೆಯನ್ನು ನಾನು ಮೀಸಲಿಡಬೇಕೆಂತಲೂ, ನನ್ನ ಅಭ್ಯಂತರವಿಲ್ಲದಿದ್ದರೆ ಮನೆಗೇ ಬರುವುದಾಗಿಯೂ ಹೇಳಿದಳು. ಧ್ವನಿಯಲ್ಲಿ ವಿನಂತಿಯಿತ್ತು. ಯಾಕೋ ಈ ಕೆಲಸ ಅಂದೇ ಮಾಡಬೇಕೆನಿಸಿತು. ಸಾಯಂಕಾಲ ಮನೆಗೆ ಬರಬಹುದೆಂದು ಹೇಳಿ, ಫೋನ್ ಇಟ್ಟೆ. ನನ್ನ ಕುತೂಹಲ ಹೆಚ್ಚಿ ನಿದ್ದೆಯ ಮಂಪರು ಕಡಿಮೆಯಾಗಿತ್ತು.

ಸಾಯಂಕಾಲ ಆಕೆ ಬಂದಾಗ ಈಕೆಯನ್ನು ಎಲ್ಲೋ ನೋಡಿದ್ದೇನಲ್ಲ ಎಂಬ ಅನಿಸಿಕೆ ಪುನಃ ಮರುಕಳಿಸಿತು. ನನ್ನ ಸ್ನೇಹಿತನ ಆಸ್ಪತ್ರೆಯಲ್ಲಿ ನೋಡಿದ್ದಂತೂ ನಿಜ. ಅದಕ್ಕೂ ಮೊದಲು ಎಲ್ಲಿಯಾದರೂ ನೋಡಿದ್ದೇನೆಯೇ? ಎಂಬ ಪ್ರಶ್ನೆಗೆ ಉತ್ತರಕ್ಕಾಗಿ ತಡಕಾಡುತ್ತ ಆಕೆಯನ್ನು ದಿಟ್ಟಿಸಿ ನೋಡಿದೆ. ಸುಮಾರು ಐದಡಿ ಎತ್ತರ, ತೆಳ್ಳಗೆಬೆಳ್ಳಗೆ ಇದ್ದ ಆಕೆ ನೂರು ಜನರಲ್ಲಿ ಎದ್ದು ಕಾಣದಂಥ ವ್ಯಕ್ತಿ.

ಭೂದೇವಿ ಹೊರಗೆ ಆಡುತ್ತಿದ್ದ ಮಕ್ಕಳ ಕಡೆಗೆ ನೋಡುತ್ತ ತನ್ನನ್ನು ತಾನೇ ಮರೆತಿದ್ದಳು. ಏನೆಂದು ಮಾತಾಡಿಸಬೇಕೆಂದು ತೋರದೆ ನಾನೂ ಸ್ವಲ್ಪ ಹೊತ್ತು ಸುಮ್ಮನಿದ್ದೆ. ಸ್ವಲ್ಪಹೊತ್ತಿನ ನಂತರ ಆಕೆ ಎಚ್ಚರಗೊಂಡು ನನ್ನ ಕಡೆಗೆ ನೋಡಲಾರದೆ, ತಲೆ ತಗ್ಗಿಸಿ, ಕಣ್ಣೀರನ್ನು ಮರೆಮಾಚುವ ವಿಫಲ ಯತ್ನ ಮಾಡಿದಳು.

ಸೆರಗು ಸುತ್ತಿಕೊಂಡು, ಕೈ ಮುಷ್ಟಿ ಕಟ್ಟಿ, ಮುದ್ದೆಯಾಗಿ ಕುಳಿತ ಆಕೆಯನ್ನು ಏನೋ ಚಿಂತೆ, ದುಃಖ ಆವರಿಸಿರುವುದು ಸ್ಪಷ್ಟವಾಗಿತ್ತು. ಏನೋ ಹೇಳಲು ತಲೆ ಎತ್ತಿ, ಉಗುಳು ನುಂಗಿ ಎರಡು ಮೂರು ಸಾರಿ ಪ್ರಯತ್ನಿಸಿದ್ದನ್ನು ಕಂಡು, ತನ್ನ ಮಾತುಗಳನ್ನು ಯಾರಾದರೂ ಕೇಳಿಯಾರೆಂಬ ಅಳುಕು ಅವಳಲ್ಲಿ ಇರಬಹುದೆಂದು ಊಹಿಸಿ, ಮನೆಯಲ್ಲಿ ಯಾರೂ ಇಲ್ಲವೆಂದು ಹೇಳಿದೆ. ನಿಧಾನವಾಗಿ ಸುಧಾರಿಸಿಕೊಂಡ ಆಕೆ ಹೇಳಲು ಪ್ರಾರಂಭಿಸಿದಳು:

'ಡಾಕ್ಟರ್, ನಿಮ್ಮ ವೇಳೆಯನ್ನು ತೆಗೆದುಕೊಂಡದ್ದಕ್ಕೆ ಕ್ಷಮೆಯಿರಲಿ. ಈ ವಿಷಯದಲ್ಲಿ ನೀವು ನನಗೆ ಸಹಾಯ ಮಾಡುವಿರೆಂದು ನಂಬಿದ್ದೇನೆ' ಎಂದಳು. ಮುಂದುವರೆಸುತ್ತ–

'ನಿಮ್ಮ ಸ್ನೇಹಿತ ಗೈನೆಕಾಲಜಿಸ್ಟ್ ಕೊಟ್ಟ ಸಲಹೆಯ ಬಗ್ಗೆ ನಾನು ಮತ್ತು ಸತೀಶ ಚರ್ಚಿಸಿದ್ದೇವೆ. ಸತೀಶನಿಗೆ ಮಕ್ಕಳೆಂದರೆ ಎಲ್ಲಿಲ್ಲದ ಮಮತೆ. 'ಪರಪುರುಷನ ವೀರ್ಯದಾನ' ಇಲ್ಲವೇ 'ದತ್ತು ತೆಗೆದುಕೊಳ್ಳುವುದು' ಇವೆರಡರಲ್ಲಿ ಒಂದರ ಆಯ್ಕೆಯನ್ನು ಸತೀಶ ನನಗೇ ಬಿಟ್ಟಿದ್ದಾರೆ. ಯಾವುದೇ ನಿರ್ಧಾರ ತೆಗೆದುಕೊಂಡರೂ ಸತೀಶ ನನ್ನೊಡನೆ ಸಹಕರಿಸುವ ಭರವಸೆ ನನಗಿದೆ. ಪರಪುರುಷನ ವೀರ್ಯದಾನಕ್ಕೆ ನನ್ನ ಮನಸ್ಸು ಒಪ್ಪುತ್ತಿಲ್ಲ...' ತನ್ನ ನಿಲುವನ್ನು ಅರುಹಿದಳು.

ಸೂರ್ಯಾಸ್ತವಾಗಿ ಕತ್ತಲು ಆವರಿಸುತ್ತಿದ್ದುದರಿಂದ ದೀಪ ಬೆಳಗಿಸಲು ಎದ್ದದ್ದನ್ನು ನೋಡಿ ಭೂದೇವಿ ಕೊಂಚ ಕಾಲ ಮಾತು ನಿಲ್ಲಿಸಿದಳು. ಹಾಗೇ ಸೊಳ್ಳೆಗಳ ಸೈನ್ಯವು ಮನೆಯ ಒಳಗಡೆ ದಾಳಿ ಮಾಡುವ ಸಮಯ ಸನ್ನಿಹಿತವಾದದ್ದರಿಂದ ಬಾಗಿಲು ಮುಚ್ಚಲು ಹೋದಾಗ, ಗುಡಿಗೆ ಹೋದ ನನ್ನಾಕೆ ಮನೆಯ